ಶ್ರೀ ಬಿ. ಲಕ್ಕಪ್ಪ.-- ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.-- ಮಾನ್ಯ ಸದಸ್ಯರು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ನಿಯಮ 334ರ ಮೇರೆಗೆ

ಸರ್ಕಾರದ ವಸತಿ ಗೃಹಗಳನ್ನು ಸರ್ಕಾರ ನಿರ್ದೇಶನ ನೀಡಿದವರಿಗೆ ನೀಡದೆ ಖಾಲಿಯಾಗಿಟ್ಟಿರುವುದರ ಬಗ್ಗೆ

ಶ್ರೀ ಬಿ. ಸ್ವಾಮಿರಾವ್.-- ಬೆಂಗಳೂರಿನಲ್ಲಿ ಸರಕಾರದ ವಸತಿಗೃಹಗಳು ಖಾಲಿಯಾಗಿದ್ದರೂ ಸಹ ಸರಕಾರಿ ವಸತಿಗೃಹಗಳ ಹಂಚಿಕೆ ನಿಯಮ ೧೪ರ ಅನ್ವಯ ಸರಕಾರ ನಿರ್ದೇಶನ ನೀಡಿದವರಿಗೆ ಮನೆಗಳನ್ನು ನೀಡದೆ ಸಂಬಂಧಿಸಿದ ಅಧಿಕಾರಿಗಳು ಮನೆಗಳನ್ನು ಮನಸ್ಸೀ ನೀಡುತ್ತಿರುವುದಲ್ಲದೆ, ಮನೆಗಳು

(ಮಾನ್ಯ ಅಧ್ಯಕ್ಷರ ಅಪ್ಪಣೆಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಕಳೆದ ಸಂಮಾರು ಒಂದು ವರ್ಷದಿಂದಲೂ ಖಾಲಿಯಾಗಿದ್ದರೂ ಸಹ ಮನೆಗಳನ್ನು ನೀಡದೆ ಸರಕಾರಕ್ಕೆ ಆರ್ಥಿಕವಾಗಿ ನಷ್ಟ ಉಂಟು ಮಾಡುತ್ತಿರುವುದರಿಂದ ಕಾನೂನು ರೀತ್ಯ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಕೊಳ್ಳಲು ಮತ್ತು ಕಾನೂನು ರೀತ್ಯಾ ಮನೆಗಳನ್ನು ಹಂಚುವ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.-- ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ, ನಾನು ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

ರೋಣ ತಾಲ್ಲೂಕು ಗಜೇಂದ್ರಗಡ ನಗರ ಸಭೆಯಂವರು ಅನಪೇಕ್ಷಿತ ಅವ್ಯವಹಾರಕ್ಕೆ ಹಣ ಖರ್ಚು ಮಾಡುತ್ತಿರುವುದರ ಬಗ್ಗೆ

ಶ್ರೀ ಜ್ಞಾನದೇವ್ ಎಸ್. ದೊಡ್ಡ ಮೇಟಿ.— ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯ ರೋಣ್ ತಾಲ್ಲೂಕು ಗಜೇಂದ್ರ ಗಡ ನಗರಸಭೆ ಅನಪೇಕ್ಷಿತ ... ಅವ್ಯವಹಾರಕ್ಕೆ ''ಹಣ'' ವನ್ನು ಖರ್ಚು ಮಾಡಂತ್ತಿದ್ದು, ವಿವರ ತರಿಸಿ ಅವಶ್ಯಕ ನೀರು ಸರಬರಾಜಿಗೂ ಲಕ್ಷವನ್ನು ಕೊಡದೆ, ಜನರ ಸಹನೆಯನ್ನು ಕೆಣಕುವ ಕೆಲಸಕ್ಕೆ ಕೈಹಾಕಿರುವರು. ಯಾವುದೇ ನಾಗರೀಕ ಅವಶ್ಯಕ ಹಿತರಕ್ಷಣೆಯ ಜವಾಬ್ದಾರಿಯನ್ನು ಅಲ್ಲಿಯ ಮುಖ್ಯಾಧಿಕಾರಿಗಳು ವಹಿಸಿಕೊಳ್ಳದೇ, ಕರ್ತವ್ಯಚ್ಯುತಿ ಮಾಡುತ್ತಿರುವುದನ್ನು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರಬಯಸುವೆ. ಅಲ್ಲದೆ ಅಧಿಕಾರಿಗಳ ಪ್ರಕಟಣೆಗಳು ಜನರಿಗೆ ತಪ್ಪು ತಿಳುವಳಿಕೆ ಕೊಡುವಂಥಾದ್ದು, ಇದನ್ನು ಸರ್ಕಾರದ ಗಮನಕ್ಕೆ ತರಬಯಸುವೆ, ಮತ್ತು ಸಬ್‌ಮರ್ಸಿಬಲ್ ಪಂಪುಗಳೂ ಸುಟ್ಟುಹೋಗಿವೆ, ಎಂಬುದನ್ನು ಮಾನ್ಯ ಸಚಿವರ ಗಮನಕ್ಕೂ ಈ ಒಳಗಾಗಿ ಮೇಲಿಂದ ಮೇಲೆ ತಂದಿರುವೆ

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಆ ಸದನದಲ್ಲಿದ್ದಾರೆ. ಅವರು ಬಂದಮೇಲೆ ಅವರಿಗೆ ಈ ವಿಚಾರವನ್ನು ತಿಳಿಸಿ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುವಂತೆ ಹೇಳುತ್ತೇನೆ.

ಶ್ರೀ ಜ್ಞಾನದೇವ್ ಎಸ್. ದೊಡ್ಡ ಮೇಟಿ.-- ಅಲ್ಲಿ ಕುಡಿಯಂವ ನೀರಿನ ಸಮಸ್ಯೆ ಬಹಳ ಇದೆ.

ಅಧ್ಯಕ್ಷರು.— ಮಾನ್ಯ ದೊಡ್ಡ ಮೇಟಿಯವರೆ ನಿಯಮ ೩೩೪ರಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ.

ಶ್ರೀ ಜ್ಞಾನದೇವ್ ಎಸ್. ದೊಡ್ಡಮೇಟಿ.--ಇಲ್ಲಿ ಮಾತನಾಡುವುದಕ್ಕಿ ಬರುವುದಿಲ್ಲವೆಂದು ತಾವು ಹೇಳುತ್ತೀರಿ. ನಾವು ಅಲ್ಲಿಗೆ ಹೋದರೆ ಆ ಜನ ನಮ್ಮನ್ನು ಮಾತನಾಡುವುದಕ್ಕೆ ಬರುವುದಿಲ್ಲ.

Don't record ***

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ದೊಡ್ಡಮೇಟಿಯವರ ಕಳವಳ ವಿನೆಂಬುದು ನನಗೆ ಗೊತ್ತಿದೆ. ಜರೂರಾಗಿ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಏನೇನು ಕ್ರಮ ಜರುಗಿಸಬೇಕೋ ಅದೆಲ್ಲವನ್ನೂ ಜರುಗಿಸಲು ವ್ಯವಸ್ಥೆ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು.— ಮಾನ್ಯ ರಘುಪತಿಯವರೆ, ಇದು ಬಹಳ ಸೀರಿಯಸ್ ಮ್ಯಾಟರ್.

ಶ್ರೀ ಎಂ. ರಘುಪತಿ.— ನಾನು ಈಗಾಗಲೇ ಹೇಳಿದಂತೆ ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳು ಇಲ್ಲಿ ಇಲ್ಲ. ಅವರು ಬಂದಕೂಡಲೇ ಇದನ್ನು ಅವರಿಗೆ ತಿಳಿಸಿ ಜರೂರಾಗಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವಂತೆ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು.— ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ, ಇದು ಬಹಳ ಸೀರಿಯಸ್ ಮ್ಯಾಟರ್ ಅಂತ ನಾನೂ ಕೂಡ ಹೇಳಿದ್ದೇನೆ.

(ಗೊಂದಲ)

ಈ ಸದನ ಮುಗಿದಮೇಲೆ ನೀವು ಅಷ್ಯೂರೆನ್ಸ್ ಕಮಿಟಿಯ ಛೇರ್ಮನ್‌ರವರನ್ನು ಭೇಟಿಮಾಡಿ ಹೇಳಿ. ನಾನೂ ಕೂಡ ಅಷ್ಯೂರೆನ್ಸ್ ಕಮಿಟಿ ಛೇರ್ಮನ್‌ಗೆ ಹೇಳುತ್ತೇನೆ. ಮಾನ್ಯ ಕೊಟ್ರಪ್ಪನವರೇ, ನೀವು ಅಷ್ಯೂರೆನ್ಸ್ ಕಮಿಂಟಿ ಛೇರ್ಮನ್. ಸದನದಲ್ಲಿ ಏನೇನು ಭರವಸೆಗಳನ್ನು ಸಚಿವರು ಕೊಡಂತ್ತಾರೆಂದು ಗುರುತು ಹಾಕಿಕೊಂಡು ಅದರ ಬಗ್ಗೆ ಕ್ರಮ ತೆಗೆದಂಕೊಳ್ಳಬೇಕು.

ಶ್ರೀ ಬಿ. ಸ್ವಾಮಿರಾವ್.—ತಾವು ಸಡಿಲಕೊಟ್ಟಿರುವುದರಿಂದಲೇ ಹೀಗಾಗಿರುವುದು.....

ಅಧ್ಯಕ್ಷರು.—ನಾನು ಅಷ್ಯೂರೆನ್ಸ್ ಕಮಿಟಿಯ ಛೇರ್ಮನ್‌ರವರಿಗೂ ಹೇಳಿದ್ದೇನೆ. ಈ ಕಡೆಯವರೂ ಕೂಡ ಅಷ್ಯೂರೆನ್ಸ್ ಕಮಿಟಿ ಛೇರ್ಮನ್‌ರವರನ್ನು ಭೇಟಿ ಮಾಡುತ್ತಿರಬೇಕು. ಆ ಛೇರ್ಮನ್‌ರವರೂ ಕೂಡ ಆಗಿಂದಾಗ್ಗೆ ಮೀಟಿಂಗ್ ಕರೆದು ಏನೇನು ಅಪ್ಯೂರೆನ್ಸ್ ಕೊಟ್ಟಿದ್ದಾರೆ ಎಂಬುದನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಬೇಕು.

3. ದಾವಣಗೆರೆ ನಗರದಲ್ಲಿ ಕುಡಿಯುವ ನೀರಿನ ಅಭಾವವನ್ನು ನಿಂಗಲು 100 ಕೊಳವೆ ಬಾವಿಗಳನ್ನು ಮಂಜೂರು ಮಾಡುವುದು ಬಗ್ಗೆ

ಶ್ರೀ ಪಂಪಾಪತಿ.— ಮಾನ್ಯ ಅಧ್ಯಕ್ಷರೆ, ದಾವಣಗೆರೆ ನಗರದಲ್ಲಿ ಕುಡಿಯುವ ನೀರಿನ ಅಭಾವವನ್ನು ಹೋಗಲಾಡಿಸಲು ನೂರು ಕೊಳವೆ ಬಾವಿಗಳನ್ನು ಮಂಜೂರು ಮಾಡುವ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ಮಾನ್ಯ ರೂರಲ್ ಡೆವಲಪ್‌ಮೆಂಟ್ ಖಾತೆಯ ಮಂತ್ರಿಗಳು ಈ ಸದನದಲ್ಲಿಲ್ಲ.

ಮಾನ್ಯ ಅಧ್ಯಕ್ಷರೇ ಪ್ರಸ್ತಾಪಿಸಿದ ವಿಷಯದ ಬಗ್ಗೆ ತಮ್ಮಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ದಾವಣಗೆರೆ ನಗರಕ್ಕೆ ಭದ್ರಾ ಜಲಾಶಯದಿಂದ ನೀರು ಪೂರೈಕೆಯಾಗುತ್ತಿದ್ದು ಸದರಿ ಜಲಾಶಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರಿನ ಮಟ್ಟ ಇಲ್ಲದಿರುವುದರಿಂದ ಭದ್ರಾ ಆಚ್ಚುಕಟ್ಟು ಪ್ರದೇಶದ ಅಧ್ಯಕ್ಷರು ದಿನಾಂಕ ೨೮ನೇ ಆಗಸ್ಟ್ ೧೯೭೨ ರಂದು ದಾವಣಗೆರೆ ಪುರಾಸಭಾ ಮಂದಿರದಲ್ಲಿ ಶಾಸಕರು ನಗರ ಸಭೆಯ ಅಧ್ಯಕ್ಷರು ಮತ್ತು ಇತರ ಗಣ್ಯರ ಸಭೆ ಕರೆದು ಜಲಾಶಯದಲ್ಲಿ ಈಗಿರುವ ನೀರಿನ ಪ್ರಮಾಣದ ಪ್ರಕಾರ ನವೆಂಬರ್ ತಿಂಗಳವರೆಗೆ ಮಾತ್ರ ನೀರು ಪೂರೈಕೆ ಮಾಡಬಹುದೆಂದೂ ಮತ್ತು ದಾವಣಗೆರೆ ನಗರಕ್ಕೆ ಕುಡಿಯುವ ನೀರಿಗಾಗಿ ಮುಂದಿನ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕೆಂದೂ ತಿಳಿಸಿರುತ್ತಾರೆ. ಈಗಿನ ಪ್ರಮಾಣದ ಪ್ರಕಾರ ನಗರಕ್ಕೆ ನೀರು ಪ್ರಮುಖವಾಗಿ